**<u>ದಿನಾಂಕಃ 04-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 1 ರಿಂದ 3, 6 ನೇ ಪ್ರತಿವಾದಿ ಪರ ಶ್ರೀ ಎಮ್ ಎಚ್ ವಕೀಲರಿಂದಃ</u>**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಡಿ.ಡಬ್ಲೂ-1 ಎಂದು ಪರಿಗಣಿಸಲಾಯಿತು.**

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ನಂಬರ 36, ಸರ್ವೆ ನಂ.36/ಆ, ಸರ್ವೆ ನಂ.38, ಸರ್ವೆ ನಂ.38/ಇ ನೇದ್ದಕ್ಕೆ ಸಂಬಂದಿಸಿದ 9 ಕೈಬರಹ ಪಹಣಿಗಳ ದೃಡಿಕೃತ ಪಹಣಿಗಳನ್ನು ಹಾಜರುಪಡಿಸುತ್ತೇನೆ ಅವುಗಳನ್ನು ಅನುಕ್ರಮವಾಗಿ ನಿಡಿ-1 ರಿಂದ ನಿಡಿ-9 ಎಂದು ಗುರುತಿಸಲಾಯಿತು. ಸರ್ವೆ ನಂ.38/ಇ ನೇದ್ದಕ್ಕೆ 4 ಗಣಕಿಕೃತ ಪಹಣಿಗಳನ್ನು ಹಾಜರುಪಡಿಸುತ್ತೇನೆ ಅವುಗಳನ್ನು ಒಟ್ಟಾಗಿ ನಿಡಿ-10 ಎಂದು ಗುರುತಿಸಲಾಯಿತು. ಸರ್ವೆ ನಂ.38 ನೇದ್ದಕ್ಕೆ ಸಂಬಂದಿಸಿದ ಎರಡು ಗಣಕಿಕೃತ ಪಹಣಿಗಳನ್ನು ಒಟ್ಟಾಗಿ ನಿಡಿ-11 ಎಂದು ಗುರುತಿಸಲಾಯಿತು. ಮುಟೇಷನ ನಂ.6 ಮತ್ತು 4 ನೇದ್ದವುಗಳ ದೃಡಿಕೃತ ಪ್ರತಿಗಳನ್ನು ಹಾಜರುಪಡಿಸುತ್ತೇನೆ ಅದನ್ನು ನಿಡಿ-12 ಮತ್ತು ನಿಡಿ-13 ಎಂದು ಗುರುತಿಸಲಾಯಿತು. ತಹಶೀಲ್ದಾರ ಹುಣಸಗಿ ಇವರಿಗೆ ಸಲ್ಲಿಸಿದ ಅರ್ಜಿ ಮತ್ತು ಸದರಿಯವರ ಆದೇಶದ ದೃಡಿಕೃತ ಪ್ರತಿಗಳನ್ನು ಹಾಜರುಪಡಿಸುತ್ತೇನೆ ಅವುಗಳನ್ನು ನಿಡಿ-14 ಮತ್ತು ನಿಡಿ-15 ಎಂದು ಗುರುತಿಸಲಾಯಿತು. ಸಹಾಯಕ ಆಯುಕ್ತಕರು ಯಾದಗಿರಿ ಇವರ ಆದೇಶದ ದೃಡಿಕೃತ ಪ್ರತಿಯನ್ನು ಹಾಜರುಪಡಿಸುತ್ತೇನೆ ಅದನ್ನು ನಿಡಿ-16 ಎಂದು ಗುರುತಿಸಲಾಯಿತು. ದಾವೆಯನ್ನು ವಜಾ ಮಾಡಿ, ನಾನು ಸಲ್ಲಿಸಿದ ಕೌಂಟರ ಕ್ಲೇಮನ್ನು ಡಿಕ್ರಿ ಮಾಡಬೇಕಾಗಿದೆ ವಿನಂತಿಸುತ್ತೇನೆ.

**<u>ಪಾಟಿ ಸವಾಲುಃ ವಾದಿ ಪರ ಶ್ರೀ ಎಸ್ ಎ ಡಿ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾಕಾಶ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.